## ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಒಡಿಯಾ ಬರಹಗಾರ್ತಿ ಪ್ರತಿಭಾ ರಾಯ್ ಸಂದರ್ಶನ

◆ **ನಿಮ್ಮ ಸಾಹಿತ್ಯಯಾನ ಕಾವ್ಯದಿಂದ ಪ್ರಾರಂಭವಾದುದು, ನಂತರ ಗದ್ಯಕ್ಕೆ, ಕಾದಂಬರಿಗೆ ವಾಲಿತು. ನಿಮ್ಮ ಗದ್ಯದಲ್ಲೂ ಕಾವ್ಯದ ಸೊಗಡು ಗಾಢವಾಗಿರುತ್ತದೆ. ಆದರೂ ನೀವು ಕಾವ್ಯ ಪ್ರಕಾರವನ್ನು ಯಾಕೆ ಮುಂದುವರಿಸಲಿಲ್ಲ?**

ನಾನು ಒಂಬತ್ತು ವರ್ಷದವಳಿದ್ದಾಗಲೇ ಪದ್ಯಗಳನ್ನು ಬರೆಯತೊಡಗಿದೆ. ಪ್ರಕೃತಿ ಕುರಿತು ಬರೆಯುತ್ತಿದ್ದೆ. ಅದು ತುಂಬಾ ಭಾವುಕ ವಯಸ್ಸು... ಮುಂದೆ ಕಾಲೇಜು ದಿನಗಳಲ್ಲಿ ಸಣ್ಣಕಥೆಗಳನ್ನು ಬರೆಯಲು ಆರಂಭಿಸಿದೆ. ಮದುವೆಯ ನಂತರ ಕಾದಂಬರಿಗಳನ್ನು ಬರೆಯತೊಡಗಿದೆ. ನನ್ನ ಸುತ್ತ ನಡೆಯುತ್ತಿರುವ ಘಟನೆಗಳು ಮತ್ತು ಸಮಸ್ಯೆಗಳ ಬಗ್ಗೆ ನನ್ನ ಭಾವನೆಗಳನ್ನು ವ್ಯಕ್ತಪಡಿಸಲು ದೊಡ್ಡ ಕ್ಯಾನ್ವಾಸ್ ಬೇಕು ಅನ್ನಿಸಿತು. ಹಾಗಾಗಿ ಕಾದಂಬರಿ ಪ್ರಕಾರಕ್ಕೆ ಹೊರಳಿಕೊಂಡೆ. ಆದರೆ, ನನ್ನ ಅರಿವಿಗೂ ಎಟುಕದೆ ನನ್ನ ಕಾದಂಬರಿಗಳಲ್ಲಿ ಕವಿತೆ ಮೂಡುತ್ತದೆ.

